Smt. C. NAGAMMA KESHAVAMURTHY.—Is there any prescribed Training Course for the Language Teachers ?

ಶ್ರೀ ಎ. ಆರ್. ಬದರೀನಾರಾಯಣ್.—ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನೂ ಸಹ ಹತ್ತು ವರ್ಷಗಳ ಕಾಲ ಕನ್ನಡ ಪಂಡಿತನಾಗಿದ್ದೆ. ನನಗೆ ತಿಳಿದಿರುವ ಮಟ್ಟಿಗೆ ಕನ್ನಡ ಪಂಡಿತರಿಗೆ ಯಾವುದೇ ಟ್ರೈನಿಂಗ್ ಕೋರ್ಸ್ ಇಲ್ಲ. ಮಾನ್ಯ ಸಚಿವರು ಇದೆ ಎಂದು ಹೇಳುತ್ತಿದ್ದಾರೆ. ಕೇವಲ ಬಿ.ಇ.ಡಿ. ಮಾಡಬೇಕು ಎಂದು ಇದೆ. ಈ ಕಾರಣದಿಂದ ಇಂಗ್ಲೀಷ್ ಭಾಷಾ ಪಂಡಿತರಿಗೆ ಕೊಡುತ್ತಿರುವ ಸಂಬಳವನ್ನೇ ಕನ್ನಡ, ಹಿಂದಿ, ಸಂಸ್ಕೃತ ಪಂಡಿತರಿಗೂ ಕೊಡುವುದಕ್ಕೆ ಇರುವ ತೊಂದರೆ ಏನು ? ಅವರು ಏನು ಪಾಪ ಮಾಡಿದ್ದಾರೆ ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಬಿ.ಇ.ಡಿ. ಟ್ರೈನಿಂಗ್ ಇದೆ ಎಂದು ಹೇಳಿದ್ದು ಎಸ್.ಎಸ್.ಎಲ್.ಸಿ. ಆದವರು ಸಹ ಇದನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಕೆಲವರು ಮಾಡಿ ಕೊಂಡಿದ್ದಾರೆ. 10 ವರ್ಷ ಆ ಪೋಸ್ಟ್‌ನಲ್ಲಿ ಎಕ್ಸ್‌ಪೀರಿಯನ್ಸ್ ಆದವರಿಗೆ ಮತ್ತು 45 ವರ್ಷ ವಯಸ್ಸಾದವರಿಗೆ 175 ರೂಪಾಯಿಗಳ ಸ್ಕೇಲನ್ನು ಕೊಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಭಾಷಾ ಪಂಡಿತರಿಗೆ ಆ ಸ್ಕೇಲ್ ಕೊಡುತ್ತಿಲ್ಲ. ಅವರಿಗೆ ಯಾವ ಸವಲತ್ತುಗಳನ್ನೂ ಕೊಡುತ್ತಿಲ್ಲ. ಅವರಿಗೆ ಘೋರವಾದ ಅನ್ಯಾಯವಾಗಿದೆ. ಇವರಿಗೆ ಎಲ್ಲ ರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಹಿಂದೆಯೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಿ.ವಿ.ಜಿ. ಅವರೇ ಒಂದು ನಿರ್ಣಯ ಮಂಡಿಸಿ ಅದನ್ನು ಪಾಸ್ ಮಾಡಿ ಕಳಿಸಲಾಗಿದೆ. ಅದರೂ ಅವರಿಗೆ ಇದುವರೆಗೆ ಏತಕ್ಕೆ ಕೊಟ್ಟಿಲ್ಲ ?

ಶ್ರೀ ಎ. ಆರ್. ಬದರೀನಾರಾಯಣ್.—ಎಸ್.ಎಸ್.ಎಲ್.ಸಿ. ಆದವರು ಬಿ.ಇ.ಡಿ.ಗೆ ಹೋಗುವುದಕ್ಕೆ ಅವಕಾಶವಿದೆ. ಅದರಂತೆ ಕೆಲವರು ಹೋಗಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಕನ್ನಡ ಪಂಡಿತ ಪರೀಕ್ಷೆಯನ್ನು ಪಾಸ್ ಮಾಡಿದರೆ ಅದು ಡಿಗ್ರಿಗೆ ಸಮ ಎಂದು ಪರಿಗಣಿಸಿರುವಾಗ ಅವರಿಗೂ ಸಹ ಜನರಲ್ ಟೀಚರ್ಸ್‌ಗೆ ಇರುವ ಸಂಬಳವನ್ನೇ ಏತಕ್ಕೆ ಕೊಡಬಾರದು ? ಆ ರೀತಿ ಕೊಡುವುದರಲ್ಲಿ ಇರುವ ಅಭ್ಯಂತರ ಏನು? ಕನ್ನಡವೇ ಆಡಳಿತ ಭಾಷೆಯಾಗಬೇಕು ಎಂಬ ತತ್ವ ಇರುವಾಗ ಕನ್ನಡ ಪಂಡಿತರಿಗೆ ಕೀಳು ದರ್ಜೆಯ ಸ್ಕೇಲ್ ಕೊಡುವುದು ಸರಿಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಟ್ರೈನಿಂಗ್ ಮಾಡಿಕೊಂಡರೆ ಒಳ್ಳೆಯದು ಎಂಬ ದೃಷ್ಟಿಯಿಂದ ಇದನ್ನು ಮಾಡಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೇವಲ ಪದವೀಧರರಾಗಿರುವವರು ಮಾತ್ರ ಬಿ.ಇ.ಡಿ.ಗೆ ಹೋಗಬೇಕು ಎಂದು ನಿಯಮ ಇದ್ದು ಎಸ್.ಎಸ್.ಎಲ್.ಸಿ. ಆದವರು ಹೋಗುವುದಕ್ಕೆ ಅವಕಾಶ ಇಲ್ಲದಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

Sri A. R. BADARINARAYANA.—The Mysore University has introduced B.Ed. course for such of the Pandits who have passed SSLC and who are within the age limit of 45 years. About 45 Language Pandits have already been deputed to the said course.

Arranging Payment of Bills Through Cheques

402. Sri K. SRIRAMULU (Gandhinagar).—

Will the Minister for Finance be pleased to state :—

whether the Government have any difficulty in making payment through cheques within two hours of presentation of the bills on behalf of various Government Departments and public in various Treasuries of the Government?

Sri M. Y. GHORPADE (Minister for Finance).—

Yes. However there is an arranagement for issuing cheques immediatly if the bills are urgent.

ಶ್ರೀ ಕೆ. ಶ್ರೀರಾಮುಲು.—ಎರಡು ಗಂಟೆಗಳೊಳಗೆ ಬಿಲ್‌ನ ಹಣವನ್ನು ಚಕ್ ಮೂಲಕ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ, ಅದಕ್ಕೆ ಕಾರಣ ಏನೆಂಬುದನ್ನು ತಿಳಿಸುತ್ತೀರಾ ?

†ಶ್ರೀ ಎಂ. ವೈ. ಘೋರ್ಪಡೆ.—ದೊಡ್ಡ ಖಜಾನೆಗಳಲ್ಲಿ ತಡವಾಗುವುದಕ್ಕೆ ಸಾಧ್ಯ, ಆದರೆ ಸಣ್ಣ ಸಣ್ಣ ಖಜಾನೆಗಳಲ್ಲಿ ತಡವಾಗುವುದಕ್ಕೆ ಸಾಧ್ಯವಿಲ್ಲ, ಅಲ್ಲಿ ತಕ್ಷಣ ಚೆಕ್ ಕೊಡುವುದಕ್ಕೆ ಸಾಧ್ಯ. ದೊಡ್ಡ ಖಜಾನೆಗಳಲ್ಲಿ ಕೆಲಸ ಜಾಸ್ತಿ ಇರುವುದರಿಂದ ಬಂದಂಥ ಬಿಲ್‌ನ್ನು ವೆರಿಫೈ ಮಾಡಬೇಕಾಗುತ್ತದೆ. ವ್ಯಾಲಿಡಿಟಿ ಆಫ್ ಕ್ಲೈಮ್ಸ್ ಅಡ್ಮಿಸಿಬಿಲಿಟಿ ಅಂಡ್ ಅಕ್ಯೂರೆಸಿ ಆಫ್ ಸಿಗ್ನೇಚರ್ ಇದೆಲ್ಲವನ್ನೂ ಈಗಿರುವ ಪ್ರೊಸೀಜರ್ ಪ್ರಕಾರ ನೋಡಬೇಕಾಗುತ್ತದೆ. ಮೊದಲು ಬಂದಂಥ ಬಿಲ್ ಟ್ರೆಜರಿ ಕ್ಲಾರ್ಕ್‌ಗೆ ಹೋಗುತ್ತದೆ. ನಂತರ ಸೂಪರ್‌ವೈಜರಿ ಸ್ಟಾಫ್‌ಗೆ ಹೋಗುತ್ತದೆ. ಅವರು ಸೂಪರ್‌ವಿಜನ್ ಮಾಡುತ್ತಾರೆ. ನಂತರ ಟ್ರೆಜರಿ ಆಫೀಸರ್‌ಗೆ ಹೋಗುತ್ತದೆ. ಅವರು ನೋಡಿದ ನಂತರ ಚೆಕ್ ಸೆಕ್ಷನ್‌ಗೆ ಹೋಗುತ್ತದೆ. ಅಕೌಂಟೆಂಟ್ ಜನರಲ್ ಅವರ ನಿಯಮಗಳ ಪ್ರಕಾರ ವೆರಿಫೈ ಮಾಡಬೇಕಾಗುತ್ತದೆ. ಆ ರೀತಿ ವೆರಿಫೈ ಮಾಡದಿದ್ದರೆ ತಪ್ಪಾಗುವ ಸಂದರ್ಭ ಇರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಬಳ್ಳಾರಿ ಜಿಲ್ಲೆಯಲ್ಲಿ, ಅಲ್ಲಯ ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ 1971ನೇ ಮಾರ್ಚ್ ತಿಂಗಳಲ್ಲಿ ವೆರಿಫೈ ಸರಿಯಾಗಿ ಮಾಡದೆ 73 ಸಾವಿರ ರೂಪಾಯಿಗಳನ್ನು ತಪ್ಪಾಗಿ ಕೊಟ್ಟಿದ್ದರು. ಈ ಒಂದು ಜವಾಬ್ದಾರಿ ಟ್ರೆಜರೀ ಆಫೀಸರ್ ಮೇಲೆ ಇರುವುದರಿಂದ ಅವರು ಎಲ್ಲವನ್ನೂ ವಿವರವಾಗಿ ವೆರಿಫೈ ಮಾಡಬೇಕಾಗುತ್ತದೆ. ಅದಕ್ಕಾಗಿ ದೊಡ್ಡ ಖಜಾನೆಗಳಲ್ಲಿ ತಡವಾಗುತ್ತದೆ. ತಡ ಎಂದರೆ ಒಂದು ದಿನ, ಎರಡು ದಿನ ಅಥವಾ ಮೂರು ದಿನ ಆಗಬಹುದು. ತಿಂಗಳ ಮೊದಲ ವಾರದಲ್ಲಿ ಮತ್ತು ಕೊನೆಯ ವಾರದಲ್ಲಿ ಕೆಲಸ ಜಾಸ್ತಿಯಿರುವುದರಿಂದ ಸ್ವಲ್ಪ ತಡವಾಗುತ್ತದೆ. ಚೆಕ್ ಕೊಡುವ ಅವಧಿ ಏನಿದೆ ಅದನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಶ್ರೀರಾಮುಲು.—ತುರ್ತು ಬಿಲ್ಲುಗಳಿದ್ದಲ್ಲಿ ಚೆಕ್ಕುಗಳನ್ನು ಆಗಿಂದಾಗಲೇ ಕೊಡುವ ವ್ಯವಸ್ಥೆ ಇದೆ ಎಂದು ಹೇಳಿದ್ದೀರಿ. ಅಂತಹ ತುರ್ತು ಬಿಲ್ಲುಗಳು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಎಷ್ಟೋ ಬಿಲ್‌ಗಳನ್ನು ಅರ್ಧ ಗಂಟೆಯೊಳಗೆ ಪಾಸ್‌ಮಾಡುವ ಸಂದರ್ಭಗಳಿರುತ್ತವೆ. ಕಂಟಿನ್‌ಜೆನ್ಸಿ ಬಿಲ್, ಅಡ್ವಾನ್ಸ್ ಟಿ.ಎ. ಬಿಲ್ಸ್, ಟೆಲಿಫೋನ್ ಚಾರ್ಜ್ ಬಿಲ್ಸ್ ಇದ್ದರೆ ಅವುಗಳನ್ನು ಜಾಗ್ರತೆ ಪಾಸ್ ಮಾಡುವುದಕ್ಕೆ ತೊಂದರೆಯಾಗುವುದಿಲ್ಲ. ಆರ್ಜೆಂಟ್ ಬಿಲ್ಸ್ ಏನಾದರೂ ಇದ್ದರೆ ಅವುಗಳನ್ನು ಸಣ್ಣ ಟ್ರೆಜರಿಯಲ್ಲಿ ಜಾಗ್ರತೆ ಪಾಸ್ ಮಾಡುವುದಕ್ಕೆ ಅವಕಾಶ ಇರುತ್ತದೆ. ಆದರೆ ಬೆಂಗಳೂರಿನ ಟ್ರೆಜರಿಯಲ್ಲಿ ಆಗುವುದಿಲ್ಲ. ಏಕೆಂದರೆ ನರಾನರಿ ದಿನಕ್ಕೆ ಸಾವಿರ ಬಿಲ್‌ಗಳು ಬರುತ್ತವೆ. ಇವೆಲ್ಲಕ್ಕೂ ಎರಡು ಗಂಟೆಯೊಳಗೆ ಚೆಕ್ ಕೊಡುವುದಕಾಗುವುದಿಲ್ಲ. ಅವುಗಳಲ್ಲಿ ಯಾವುದಾದರೂ ಆರ್ಜೆಂಟ್ ಇದ್ದರೆ ಅವುಗಳ ಮೇಲೆ ಟಾಪ್‌ಪ್ರೈಯಾರಿಟಿ ಎಂದು ಟ್ರೆಜರಿ ಆಫೀಸರ್ ತಮ್ಮ ಡಿಸ್ಕ್ರಿಷನ್ ಉಪಯೋಗ ಮಾಡಿ ಬರೆಯುತ್ತಾರೆ. ಆ ರೀತಿಯಲ್ಲಿ ಬರೆಯುವ ಬಗ್ಗೆ ರೂಲ್ಸ್‌ನಲ್ಲಿ ಏನೂ ಬರೆದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಆರ್ಜೆಂಟ್ ಬಿಲ್‌ಗಳು ಇದ್ದರೆ ಜಾಗ್ರತೆ ಚೆಕ್ ಕೊಡಲಾಗುತ್ತದೆ ಎಂದು ತಾವು ಕೇಳಿದಿರಿ. ಆ ರೀತಿ ಆರ್ಜೆಂಟ್ ಇದ್ದರೂ ನಹ ಮಾಮೂಲು ಕೊಡಲಲ್ಲ ಎಂಬ ಕಾರಣದಿಂದ ನಿಧಾನ ಮಾಡುತ್ತಾರೆ, ಅದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಆರ್ಜೆಟ್ ಇದ್ದರೆ ನಾನು ಹೇಳಿದ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಡಿಸ್ಕ್ರಿಷನ್ ಉಪಯೋಗ ಮಾಡಿ ಅದರ ಮೇಲೆ ಆರ್ಜೆಂಟ್ ಬರ್ ಎಂದು ಬರೆಯ ಬೇಕಾಗುತ್ತದೆ. ಮಾಮೂಲು ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಮಾಮೂಲು ಇದೆ ಎಂದು ಹೇಳಿದರೆ, ಸರ್ಕಾರದವರು ಇಲ್ಲ, ಕಾನೂನು ಪ್ರಕಾರ ಕೆಲಸ ಮಾಡುತ್ತೇವೆ ಎಂದು ಹೇಳುತ್ತೇವೆ.

MADAM SPEAKER.—Now held our Question No. 530 of Sri H. D. Deve gowda;